ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 104- 114
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸಾಹಿತ್ಯದಲ್ಲಿ 'ಸಗರ' ವೈಭವ

**ಡಾ. ರಾಮರೆಡ್ಡಿ ಎಸ್. ರಡ್ಡೇರ** *

*ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ಆರ್.ಟಿ.ಇ.ಎಸ್ ಪದವಿ ಕಾಲೇಜು, ರಾಣೇಬೆನ್ನೂರು.

***Abstract:***

*ಪ್ರಾಚೀನ ಕನ್ನಡ ಶಾಸನಗಳಲ್ಲಿ, ಪ್ರಾಚೀನ ಮತ್ತು ಮಧ್ಯಕಾಲೀನ ವಚನ ಕಾವ್ಯಗಳಲ್ಲಿ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಾಗೂ ಜಾನಪದ ಸಾಹಿತ್ಯದಲ್ಲಿ ಸಗರವನ್ನು ಕುರಿತು ವೈಭವದ ವರ್ಣನೆ ಅಭಿವ್ಯಕ್ತಿಗೊಂಡಿದೆ. ಇದು ಪ್ರಾಚೀನ ಕರ್ನಾಟಕದ ಸಗರ ನಗರದ ವೈಶಿಷ್ಟ್ಯ ಮತ್ತು ಸಗರನಾಡು ಮತ್ತು ವೈಭವದ ಸಾಂಸ್ಕೃತಿಕ ಚರಿತ್ರೆಯನ್ನು ಬಿತ್ತರಿಸುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಸಗರ ನಗರ, ಸಗರ ನಾಡು, ವೈಭವ.*

### ಪೀಠಿಕೆ

ಕ್ರಿ.ಶ.1017ರ ತಿಂಥಣಿ ಶಾಸನದಲ್ಲಿ ಸಗರ–300 ಕುರಿತು 'ಎಡದೊರೆ ವಿಷಯ ಪ್ರತಿವದ್ಧ ಸಗರತ್ರಿಶತ ಮಧ್ಯವರ್ತಿ ಕೃಷ್ಣಾವೇಣ್ಣಾನದ್ಯತ್ತರತೀರೋಪಾಶ್ರಿತೇ"[1] ಎಂದು ನಿರೂಪಿತಗೊಂಡಿದೆ. ಇದರಲ್ಲಿ ಸಗರನಾಡು ಎಡದೊರೆ ನಾಡಿನ ಎದುರಿನಲ್ಲಿ ಕೃಷ್ಣಾ–ಭೀಮಾ ನದಿಗಳ ತೀರಕ್ಕೆ ಹೊಂದಿಕೊಂಡು ಅಸ್ತಿತ್ವದಲ್ಲಿತ್ತೆಂದೂ ಸಗರ ನಗರವು ಈ ನಾಡಿನ ಮಧ್ಯದಲ್ಲಿ ವಿಜೃಂಬಿಸುತ್ತಿತ್ತೆಂಬ ಭಾವದ ಅಭಿವ್ಯಕ್ತಿಯಿದೆ' ಕ್ರಿ.ಶ.1239ರ ಬಿಜಾಸ್ಪುರ ಶಾಸನದಲ್ಲಿ "ಮೂಡಣ ನಿರ್ಮ್ಮಳ ಧರ್ಮಾಂಬುಧಿ ಮಹಾಪಟ್ಟಣಂ ಸಗರ"[2] ಎಂದು ವರ್ಣಿಸಲಾಗಿದೆ. ಅಂದರೆ, 'ಸಗರವು ಮಹಾಪಟ್ಟಣವಾಗಿತ್ತು. ಅದು ಮೂಡಲ ದಿಕ್ಕಿನ ಪ್ರಸಿದ್ಧವಾದ ಧರ್ಮಕ್ಷೇತ್ರವಾಗಿದ್ದಿತು' ಎಂಬ ವಿವರವಿದೆ. ಮೇಲಿನ ತಿಂಥಣಿ ಶಾಸನ ಸಗರ–300ರ ಸ್ಥಾನ ನಿರ್ದೇಶನ ನೀಡಿದರೆ, ಬಿಜಾಸ್ಪುರ ಶಾಸನದಲ್ಲಿ 'ಸಗರ ಮಹಾಪಟ್ಟಣವು ನಿರ್ಮಲವಾದ ಧರ್ಮಾಂಬುಧಿಯಾಗಿತ್ತು'–ಎಂದು ಸಗರ ಪಟ್ಟಣದ ಘನತೆ ಮತ್ತು ಧಾರ್ಮಿಕವಾದ ಅಪೂರ್ವ ಮಹತ್ವವನ್ನು ಸಾರುತ್ತದೆ.

ಸಗರದಲ್ಲಿ ಬ್ರಹ್ಮಯ್ಯ, ಮಲ್ಲಯ್ಯ, ಮಾರಯ್ಯ, ನಾಚಯ್ಯ ಮತ್ತು ಸಗರದ ಶೂದ್ರರೆಂಬ ಐದು ಜನ ಶರಣರು ಮತ್ತು ಶಿವದೇವಿ ಎಂಬ ಶರಣೆ ಇವರೆಲ್ಲ 12ನೆ ಶತಮಾನದಲ್ಲಿ ನೆಲೆಸಿದ್ದರು. ಕನ್ನಡದ ವೀರಶೈವ ಸಾಹಿತ್ಯದಲ್ಲಿ ಇವರು ಸಗರದ ಬ್ರಹ್ಮಯ್ಯ, ಸಗರದ ಮಲ್ಲಯ್ಯ, ಸಗರದ ಮಾರಯ್ಯ, ಸಗರದ ನಾಚಯ್ಯ & ಸಗರ ಶೂದ್ರರೆಂದು ಉಲ್ಲೇಖಗೊಂಡಿದ್ದಾರೆ. ಇವರೆಲ್ಲರೂ ಮಹಿಮಾನ್ವಿತ ಶರಣರಾಗಿರುವುದರಿಂದಲೇ ಮಹತ್ವದ ವೀರಶೈವ ಕಾವ್ಯಗಳಲ್ಲಿ ಉಲ್ಲೇಖಿತಗೊಂಡಿದ್ದಾರೆ. ಸಗರದ ಮಾರಯ್ಯನನ್ನು ಕವಿ ಗುಬ್ಬಿಯ ಮಲ್ಲಣಾರ್ಯ ರಚಿಸಿರುವ 'ವೀರಶೈವಾಮೃತ ಪುರಾಣ'ದಲ್ಲಿ ಹೀಗೆ ನಿರೂಪಿಸಲಾಗಿದೆ;

***Please cite this article as:*** ರಾಮರೆಡ್ಡಿ ಎಸ್. ರಡ್ಡೇರ. (2022). ಸಾಹಿತ್ಯದಲ್ಲಿ 'ಸಗರ' ವೈಭವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 1(5), 104–114.

***"ಆರಿ ಪರವಾದಿಗಳ ಕೊಂದ ಸಗರದೊಳೆಸೆವ ಮಾರಯ್ಯನಾ***
***ಹೇಮ ಪುಷ್ಪಕದೊಳೀಶನಾಗಾರಮಂ ಪೊಕ್ಕ"***[3]

ಇಲ್ಲಿ ನಿರೂಪಿತವಾಗಿರುವ ವಿಷಯವೆಂದರೆ, 'ಸಗರದಲ್ಲಿದ್ದ ಮಾರಯ್ಯನೆಂಬ ಶರಣನು ವೀರಶೈವ ಧರ್ಮವಿರೋಧಿಗಳೆನಿಸಿದ ಪರವಾದಿಗಳನ್ನು ಕೊಂದನೆಂದೂ; ಈ ಧರ್ಮಕ್ಕಾಗಿ ಮೆಚ್ಚಿದ ಶಿವನು ಮಾರಯ್ಯನನ್ನು ಚಿನ್ನದ ಪುಷ್ಪಕ ವಿಮಾನದಲ್ಲಿ ತನ್ನ ನಗರಕ್ಕೆ ಕರೆದೊಯ್ದನೆಂದೂ ವಿವೇಚಿಸಲಾಗಿದೆ.' ಇದೇ ವಿಷಯವನ್ನು ಆಧರಿಸಿ ಡಾ.ಫ.ಗು.ಹಳಕಟ್ಟಿಯವರು '770 ಅಮರಗಣಾಧೀಶ್ವರರ ಚರಿತ್ರೆಗಳು' ಎಂಬ ಕೃತಿಯಲ್ಲಿ ಈತನ ಚರಿತ್ರೆಯನ್ನೂ ರಚಿಸಿದ್ದಾರೆ. ಅಲ್ಲದೆ, ತ.ಸು.ಶಾಮರಾಯರ 'ಶಿವಶರಣರ ಕಥಾರತ್ನಕೋಶ'ದಲ್ಲಿ 'ಸಗರದ ನಾಚಯ್ಯನು ಪರವಾದಿಗಳನ್ನು ಜಯಿಸಿದ ವೀರ ಶಿವಶರಣ'ನೆಂದು ಸಂಕ್ಷಿಪ್ತವಾಗಿಯೇ ಪರಿಚಯಿಸಿದ್ದಾರೆ.[4]

'ಸಗರದ ಶೂದ್ರ'ನೆಂಬ ಇನ್ನೊಬ್ಬ ಶರಣನ ಉಲ್ಲೇಖ ಕೂಡಾ 'ವೀರಶೈವಾಮೃತ ಪುರಾಣ'ದಲ್ಲಿ ಉಪಲಬ್ಧವಾಗಿದೆ.[5] ಈತ ಒಕ್ಕಲಿಗ ವೃತ್ತಿಯನ್ನು ನಡೆಸುತ್ತ 80 ವರ್ಷಗಳನ್ನು ಬಾಳಿದರೂ ದೇವಾಲಯಗಳಿಗೆ ಹೋಗಿರಲಿಲ್ಲವಂತೆ. ಕೊನೆಗೊಂದು ದಿನ ಭಯಂಕರವಾದ ಮಳೆಗೆ ಹೆದರಿ ಹೋಗಿ ದೇವಾಲಯವನ್ನು ಹೊಕ್ಕು, ಅಲ್ಲಿ ಶಿವನ ಪುರಾಣವನ್ನು ಕೇಳಿ, ಮನಃ ಪರಿವರ್ತನೆಗೊಂಡು, ಆಚಾರದಿಂದ ಬದುಕಿ–ಬಾಳಿ, ಶಿವಾಚಾರವನ್ನು ಅಳವಡಿಸಿಕೊಳ್ಳುತ್ತಾನೆ. ಮುಂದೆ ಈತ ಲಿಂಗೈಕ್ಯನಾದ ಮೇಲೆ ಕೈಲಾಸಕ್ಕೆ ಹೋಗಿ ಅಲ್ಲಿ ಶಿಶ್ನವಕ್ತ್ರಗಣನಾಥನಾದನೆಂದು ವಿವರಿಸಲಾಗಿದೆ.

ಸಗರದ ಬ್ರಹ್ಮಯ್ಯ ಮತ್ತು ಆತನ ಪತ್ನಿ ಸಗರದ ಶಿವದೇವಿ ಎಂಬ ಶರಣೆ–ಇವರ ಚರಿತ್ರೆ ಹಲವಾರು ವೀರಶೈವ ಕಾವ್ಯಗಳಲ್ಲಿ ನಿರೂಪಿತವಾಗಿದೆ. ಪಾಲ್ಕುರಿಕೆ ಸೋಮನಾಥ ಮತ್ತು ಮಲ್ಲಿಕಾರ್ಜುನ ಪಂಡಿತರಾಧ್ಯರ 'ಗಣಸಹಸ್ರನಾಮಾವಳಿ', ಉತ್ತರದೇಶದ ಬಸವಲಿಂಗ ಕವಿಯ 'ಬಸವೇಶ್ವರ ಪುರಾಣದ ಕಥಾಸಾಗರ', ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ', ಪರ್ವತೇಶನ 'ಚತುರಾಚಾರ್ಯ ಚರಿತ್ರೆ' ಡಾ.ಎಂ.ಎಂ.ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ಸಂಪಾದಿಸಿದ 'ಸಮಗ್ರ ವಚನ ಸಂಪುಟ–9'–ಈ ಮುಂತಾದ ಕಾವ್ಯ–ಕೃತಿಗಳಲ್ಲಿ ಸಗರದ ಬ್ರಹ್ಮಯ್ಯನ ಚಾರಿತ್ರಿಕ ವಿವೇಚನೆ ಬರುತ್ತದೆ. ಈತ ಅಪೂರ್ವ ಮಹತ್ವದ ಬೆಡಗಿನ ವಚನಗಳನ್ನು ರಚಿಸಿದ್ದು, 'ಸಮಗ್ರ ವಚನ ಸಂಪುಟ–9' ರಲ್ಲಿ 'ಸಗರದ ಬೊಮ್ಮಣ್ಣನ ವಚನ' ಎಂಬ ಶೀರ್ಷಿಕೆಯಲ್ಲಿ ಈತನ 91 ವಚನಗಳು ಪ್ರಕಟಗೊಂಡಿವೆ. 'ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ', 'ಸಗರದ ಮೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗ'– ಎಂಬ ಅಂಕಿತಗಳು ಈತನ ವಚನಗಳಲ್ಲಿದೆ.

***"ಮಸಣ ಮನೆಯಾಯಿತ್ತು, ಮನೆ ಮಸಣವಾಯಿತ್ತು!***
***ಹುಸಿಯ ನುಡಿದವ ಪಶುಪತಿಯ ಗೆದ್ದ,***
***ದಿಟವ ನುಡಿದವ ಸರ್ವಪಾಪಕ್ಕೆ ಗತನಾದ;***
***ಈ ಉಭಯದ ಕುಟಿಲವ ಹೇಳಾ, ನನಗದು ಭೀತಿ!***
***ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ"***[6]

***"ಬಂದೆ ಗುಡಿಯ ಹೊತ್ತು, ಡೊಂಬರ ಹಿಂದೆ ಹೋದೆ ಸುತ್ತಿ;***
***ಸೂಳೆ ಮಚ್ಚಿ ನಾಣುಗೆಟ್ಟೆ;***

***ಕಾಯಕವೆಂಬ ಗುಡಿ, ಮೋಹವೆಂಬ ಸೂಳೆ;***
***ಅರಿವ ಮನ ಅರಿಯದೆ ಡೊಂಬರಾಟವೆಂಬ ಬಂಧನದಲ್ಲಿ ಹೊಕ್ಕುನೊಂದೆ;***
***ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವೆ,***
***ನಿನ್ನೊಂದಿಗಾಗಿ ಕೊಂಡಾಡಲಂಜುವೆ."7***

ಎಂಬಂಥ ಈತನ ವಚನಗಳಲ್ಲಿ ವೀರಶೈವ ಧರ್ಮದ ತತ್ವ-ಸಿದ್ಧಾಂತಗಳು ಮಾರ್ಮಿಕವಾಗಿ ಬೆಡಗಿನಿಂದ ಭಿತ್ತರಗೊಂಡಿವೆ.

'ಸಗರದ ಬ್ರಹ್ಮಯ್ಯನ ಚರಿತ್ರೆ'ಯು ಆತನ ವಚನಗಳಿಂದ ಮತ್ತು ವೀರಶೈವ ಕಾವ್ಯಗಳಿಂದ ಚಿರಸ್ಥಾಯಿಯಾಗಿ ನೆಲೆಯೂರಿದೆ. ಈತ ಬಾಳಿದ ಕಾಲ 12 ನೆಯ ಶತಮಾನ. ಈತನ ಇಷ್ಟದೈವ ಸಗರದ ಸಂಗಮೇಶ್ವರಲಿಂಗ. ಆಗ ಸಗರದಲ್ಲಿ ಜೈನಧರ್ಮೀಯರು ಬಹುಸಂಖ್ಯೆಯಲ್ಲಿ ಇದ್ದರು. ಶಿವನೇ ಸರ್ವೋತ್ತಮನೆಂದು ಬ್ರಹ್ಮಯ್ಯನು ಭಕ್ತಿಭಾವದಿಂದ ನಂಬಿದ್ದನು. ಶಿವಪಾರಮ್ಯವನ್ನು ಸ್ಥಾಪಿಸುವುದೇ ಬ್ರಹ್ಮಯ್ಯನ ಜೀವನದ ಪರಮಧ್ಯೇಯವಾಗಿತ್ತು. ಇವನೊಬ್ಬ ವೀರ ಶಿವಶರಣನಾಗಿದ್ದ. ಹೀಗಿರುವಾಗ ಒಮ್ಮೆ ಸಗರದ ಜೈನರು 'ಜೀನನೇ ಸರ್ವಶ್ರೇಷ್ಠ; ಶಿವನಲ್ಲ'ವೆಂದು ಬ್ರಹ್ಮಯ್ಯನೊಂದಿಗೆ ವಾದ ಮಾಡುತ್ತಾರೆ. ಆಗ ಬ್ರಹ್ಮಯ್ಯನು 'ಶಿವನೇ ಸರ್ವಶ್ರೇಷ್ಠನೆಂದು ಪ್ರತಿವಾದಿಸುತ್ತಾನೆ. ಆಗ ಜೈನರು 'ಶವನೇ ಸರ್ವಶ್ರೇಷ್ಠವೆನ್ನಲು ಪ್ರಮಾಣವೇನು?' ಎಂದು ಕೇಳುತ್ತಾರೆ. ಆಗ ಬ್ರಹ್ಮಯ್ಯನು ಕೆಂಪಗೆ ಕಾದ ಉಕ್ಕಿನ ತುಂಡನ್ನು ಕೈಯಲ್ಲಿ ಹಿಡಿದು ಕಾದ ಎಣ್ಣೆಯಲ್ಲಿ ಅದ್ದಿ ತೆಗೆಯುತ್ತಾನೆ. ಆಗ ಇದರಿಂದ ಅವನಿಗೂ ಅಪಾಯವಾಗುವುದಿಲ್ಲ. ಆಮೇಲೆ ಬ್ರಹ್ಮಯ್ಯನು ಜೈನರನ್ನು ಕುರಿತು 'ನೀವೂ ಹೀಗೆ ಮಾಡಿದರೆ ಜಿನನ ಶ್ರೇಷ್ಠತೆ ಒಪ್ಪಿಕೊಳ್ಳುತ್ತೇನೆ' ಎನ್ನುತ್ತಾನೆ. ಆಗ ಜೈನರು ಬ್ರಹ್ಮಯ್ಯನ ಮಹಿಮೆಗೆ ಹೆದರಿ ಅಲ್ಲಿಂದ ಪಲಾಯನ ಮಾಡುತ್ತಾರೆ.[8]

ಇನ್ನೊಂದು ಪ್ರಸಂಗದಲ್ಲಿ ಬ್ರಹ್ಮಯ್ಯನ ಬದುಕಿನ ಮತ್ತೊಂದು ಘಟನೆ ತಿಳಿಯುತ್ತದೆ. ಬ್ರಹ್ಮಯ್ಯನು 'ನಮಃ ಶಿವಾಯ' ಎಂಬ ಪಂಚಾಕ್ಷರೀ ಮಂತ್ರಪಠಣವೇ ಸಕಲ ಸಂಕಷ್ಟ ನಿವಾರಕ ವೈದ್ಯ(ಔಷಧ)'ವೆಂದು ದೃಢವಾಗಿ ನಂಬಿದ್ದ. ಹೀಗಾಗಿ ಆತ ಯಾವ ಕಾಯಿಲೆಗೂ ಔಷಧ ತೆಗೆದುಕೊಳ್ಳುತ್ತಿರಲಿಲ್ಲ. ಹೀಗಿರುವಾಗ ಬ್ರಹ್ಮಯ್ಯನಿಗೆ ಒಮ್ಮೆ ವಿಪರೀತವಾದ ತಲೆನೋವು ಬಂದು ತಲೆಯನ್ನು ಕಾಯಿಸಿಕೊಳ್ಳುತ್ತಿದ್ದನು. ಅದನ್ನು ಕಂಡ ಅವನ ಧರ್ಮಪತ್ನಿ ಶರಣೆ ಶಿವದೇವಿಯು ಗಂಡನನ್ನು ಕುರಿತು 'ಹಾಲು ತುಪ್ಪವಾದಡೂ ಪಥ್ಯವಲ್ಲವೇ? ಬೆಂಕಿ ಬಿಸಿನೀರಾದರೂ ವೈದ್ಯವಲ್ಲವೇ? ನಿಮ್ಮ ಬಿರಿದೇನಾಯ್ತು?'-ಎಂದು ಪ್ರಶ್ನಿಸುತ್ತಾಳೆ. ಆಗ ಬ್ರಹ್ಮಯ್ಯನು ಮರೆವಿನಿಂದ ತನ್ನ ಆಚಾರಕ್ಕೆ ಉಂಟಾದ ತಪ್ಪಿಗೆ ಪಶ್ಚಾತಾಪ ಪಟ್ಟುಕೊಂಡು 'ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವೇ ಎನ್ನಂಗದಾಚರಣೆ ಹಿಂಗಿತು' ಎಂದು ಪ್ರಾಯಶ್ಚಿತ್ತಪಟ್ಟುಕೊಳ್ಳುತ್ತಾನೆ.[9]

ಬ್ರಹ್ಮಯ್ಯನ ಜೀವನಕ್ಕೆ ಸಂಬಂಧಿಸಿದ ಮೂರನೆಯ ಘಟನೆ ಐತಿಹಾಸಿಕ ಚಿರಸ್ಮರಣೆಯ ದ್ಯೋತಕವಾಗಿದೆ. ಅದೇನೆಂದರೆ, ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ನಡೆದ ಘಟನೆ. ಅಂತರ್‌ಜಾತಿ ವಿವಾಹದ ಪ್ರಸಂಗವೇ ಕಲ್ಯಾಣದ ಕ್ಷೋಭೆಗೆ ತತ್‌ಕ್ಷಣದ ಕಾರಣವಾಗಿ ಪರಿಣಮಿಸುತ್ತದೆ. ಅದನ್ನು ಉತ್ತೇಜಿಸಿದವ ಬಸವಣ್ಣನಾದರೆ, ಅದಕ್ಕೆ ಸಮ್ಮತಿಸಿ ನೆಂಟರಾದವರು ಸಮಗಾರ ಅರಳಯ್ಯ ಮತ್ತು ಬ್ರಾಹ್ಮಣರ ಮಧುವರಸರು. ಇದರಿಂದ ಕುಪಿತನಾಗಿದ್ದ ದೊರೆ ಬಿಜ್ಜಳನು ಬಸವಣ್ಣನಿಗೆ ಗಡಿಪಾರು ಶಿಕ್ಷೆ ವಿಧಿಸಿದರೆ, ಸಮಗಾರ ಅರಳಯ್ಯ ಮತ್ತು ಮಧುವರಸರಿಗೆ ಕಣ್ಣು ಕೀಳಿಸಿ ಎಳೆ ಊಟಿಯ ಶಿಕ್ಷೆ

ವಿಧಿಸುತ್ತಾನೆ. ಇದರಿಂದ ಶರಣಧರ್ಮಕ್ಕೆ ಮತ್ತು ಶಿವಶರಣರಿಗೆ ಬಿಜ್ಜಳನಿಂದ ಅವಮಾನವಾಯಿತೆಂದು ನೊಂದುಕೊಂಡ ಶರಣರೆಲ್ಲ ಬಸವಣ್ಣನ ನೇತೃತ್ವದಲ್ಲಿ ಸಭೆ ಸೇರುತ್ತಾರೆ. ಸಭೆಯಲ್ಲಿ ಪರವಾದಿ ದೊರೆ ಬಿಜ್ಜಳನನ್ನು ಸಂಹರಿಸುವ ತೀರ್ಮಾನ ಕೈಕೊಳ್ಳುತ್ತಾರೆ. ಅದರ ಜವಾಬ್ದಾರಿಯನ್ನು ಅಂದಿನ ಕಾಲದಲ್ಲಿ ಧರ್ಮ ಸಂರಕ್ಷಣೆಗಾಇ ಜೀವನವನ್ನು ಮುಡಿಪಾಗಿಟ್ಟಿದ್ದ ವೀರಶೈವ ಶರಣರಾದ ಸಗರದ ಮಲ್ಲಯ್ಯ–ಬೊಮ್ಮಯ್ಯ, ಜಗದೇವರಿಗೆ ವಹಿಸಲಾಗುತ್ತದೆ.

ಆ ಜವಾಬ್ದಾರಿಯನ್ನು ನೆರವೇರಿಸಲು ಬ್ರಹ್ಮಯ್ಯನು ಮಲ್ಲಯ್ಯನೊಂದಿಗೆ ಸಗರದಿಂದ ಕಲ್ಯಾಣಕ್ಕೆ ಹೋಗಿ, ವೀರಾವೇಶದಿಂದ ಬಿಜ್ಜಳನ ಅರಮನೆಯನ್ನು ಪ್ರವೇಶಿಸಿ, ಓಲಗವನ್ನು ನಡೆಸುತ್ತ ಸಿಂಹಾಸನದ ಮೇಲೆ ವಿರಾಜಮಾನನಾಗಿದ್ದ ದೊರೆ ಬಿಜ್ಜಳನನ್ನು ಇರಿದು ಘೋರವಾಗಿ ಕೊಂದು, ವೀರ ಘೋಷಣೆಯೊಂದಿಗೆ ಹೊರಬಂದು, ಮುತ್ತಿಗೆ ಹಾಕಿದ ಸೈನ್ಯದೊಂದಿಗೆ ಹೋರಾಡುತ್ತಲೇ ಕೈಲಾಸವನ್ನು ಹೊಂದುತ್ತಾನೆ.[10] ಇದು ಸಗರದ ವೀರಶರಣ ಬ್ರಹ್ಮಯ್ಯನ ಚರಿತ್ರೆಯ ಸ್ಮರಣೆಯಾಗಿದೆ.

ಇನ್ನು ಸಗರದ ಶಿವದೇವಿಯನ್ನು ಕುರಿತು ವಿವೇಚಿಸುವುದಾದರೆ, ಈ ಶರಣೆ ಕೂಡ ಪತಿ ಬ್ರಹ್ಮಯ್ಯನಂತೆ ನಿಷ್ಠುರೆಯಾಗಿದ್ದ ವೀರಭಕ್ತೆ. ಸ್ವತಂತ್ರವಾದ ವೈಚಾರಿಕ ಪ್ರಜ್ಞೆ ಈ ಶರಣೆಯದಾಗಿತ್ತು. ಪತಿಯ ವ್ರತನಿಷ್ಠೆಯನ್ನೇ ಪ್ರಶ್ನಿಸಿದ್ದ ಈಕೆಯದ್ದು ಕೂಡಾ ವಿಶಿಷ್ಟವಾದ ವೈಚಾರಿಕ ವ್ಯಕ್ತಿತ್ವ. ಈ ಶರಣೆಯ ಬದುಕಿನ ಘಟನೆಯೊಂದನ್ನು ಕವಿ ಸಿದ್ಧನಂಜೇಶನು 'ಗುರುರಾಜಚಾರಿತ್ರ'ದಲ್ಲಿ ನಿರೂಪಿಸಿದ್ದಾನೆ. ಅದೇನೆಂದರೆ, ಶರಣೆ ಶಿವದೇವಿ ಕೂಡಾ ಪತಿಯಂತೆ ಅಪೂರ್ವ ಆಚಾರನಿಷ್ಠೆಯೊಂದನ್ನು ಪಾಲಿಸುತ್ತಿದ್ದಳು. 'ಗುರುರಾಜಚಾರಿತ್ರ'ದಲ್ಲಿ ಅದು ಹೀಗೆ ನಿರೂಪಿತವಾಗಿದೆ;

***"ಶಿವದೇವಿಯೆಂಬ ಸದ್ಭಕ್ತೆ ಧೂಪವ ನಿತ್ಯ***
***ಶಿವಗರ್ಪಿಸುವ ನೇಮ ತಪ್ಪಿತ್ತೆಂದು ತನುವ ಬಿಡಲೀಶ ಪ್ರತ್ಯಕ್ಷನಾದಂ."*** [11]

ಸದ್ಭಕ್ತೆಯಾಗಿದ್ದ ಶಿವದೇವಿ ನಿತ್ಯವೂ ತಪ್ಪದೇ ಶಿವನಿಗೆ ಧೂಪವನ್ನು ಅರ್ಪಿಸುವ ನೇಮವನ್ನು ಪಾಲಿಸುತ್ತಿದ್ದಳು. ಒಮ್ಮೆ ನೇಮವನ್ನು ನೆರವೇರಿಸಲು ಧೂಪವು ಸಿಗದೇ ಇದ್ದಾಗ, ವ್ರತ ತಪ್ಪಿತ್ತೆಂದು ಪ್ರಾಣವನ್ನು ಅರ್ಪಿಸಲು ಸಿದ್ಧಳಾಗುತ್ತಾಳೆ. ಆಗ ಶಿವದೇವಿಗೆ ಸಾಕ್ಷಾತ್ ಶಿವನೇ ಪ್ರತ್ಯಕ್ಷನಾಗುತ್ತಾನೆ. ಇದು 'ಗುರುರಾಜಚಾರಿತ್ರ'ದಲ್ಲಿ ನಿರೂಪಿತವಾದ ಸಂಗತಿಯಾಗಿದೆ.

ಪ್ರಸ್ತುತ 'ದಿಗ್ಗಿ ಸಂಗಮೇಶ್ವರ'ಎಂದು ಕರೆಯಲ್ಪಡುವ ದೇವಸ್ಥಾನವು ಅದು ಪ್ರಾಚೀನ ಕಾಲದಲ್ಲಿ ದಿಗ್ಗಿಗೆ ಸಂಬಂಧಿಸಿದ್ದಲ್ಲ; ದಿಗ್ಗಿಯಿಂದ ಸುಮಾರು 1 ಕಿ.ಮೀ ಅಂತರದಲ್ಲಿ ಪೂರ್ವಕ್ಕೆ ಗುಡ್ಡಕ್ಕೆ ಹೊಂದಿಕೊಂಡಿರುವ ಈ ದೇವಸ್ಥಾನ ಶರಣ ಸಗರದ ಬ್ರಹ್ಯಯ್ಯನ ಇಷ್ಟದೈವವಾಗಿದೆ. ಇದು 12ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಇದ್ದಿತೆಂಬುದು ಖಚಿತಪಡುತ್ತದೆ. ಹೀಗಾಗಿ ಇದು ಸಗರದ ಸಂಗಮೇಶ್ವರ ದೇವಸ್ಥಾನವೆಂಬುದು ಸ್ಪಷ್ಟವಾಗುತ್ತದೆ.

ಕೊಡೆಕಲ್ಲ ಬಸವಣ್ಣನ ಗುರು ಮತ್ತು ಕಕ್ಕೇರಿ ಪರಮಾನಂದನ ಪರಮ ಶಿಷ್ಯನೂ ಆಗಿದ್ದ ಆರೂಢ ಸಂಗಮನಾಥನೆಂಬ ಶರಣನು ನೆಲೆಗೊಂಡಿದ್ದ ಸ್ಥಳವೂ ಕೂಡಾ ಇದೇ ಆಗಿದೆ. ವಿಜಯನಗರದ ಅರಸರು ಮತ್ತು ಬಹಮನಿ ಸುಲ್ತಾನರ ಮಧ್ಯದ ರಾಜಕೀಯ ಕಾಳಗದ ಕಾಲದಲ್ಲಿ ಶರಣ ಸಂಗಮನಾಥನು ನಿತ್ಯ ದಾಸೋಹ ಗೈಯುತ್ತ ನೆಲೆಗೊಂಡಿದ್ದ ಸ್ಥಳ ಕೂಡಾ ಸಗರದ ಸಂಗಮೇಶ್ವರ ದೇವಸ್ಥಾನವಾಗಿತ್ತು. ಇಲ್ಲಿಯವರೆಗೂ ಈ ಸಂಗಮೇಶ್ವರ ದೇವಸ್ಥಾನವನ್ನು ಆರೂಢ ಸಂಪ್ರದಾಯದವನಾದ 15ನೆಯ ಶತಮಾನದ ಸಂಗಮನಾಥನಿಂದ ಉದಯಿಸಿದ ಸ್ಮರಣೆಯ

ಕೇಂದ್ರವೆಂದು ಸಂಶೋಧನಾ ಕ್ಷೇತ್ರದಲ್ಲಿ ಪರಿಗಣಿಸಲಾಗಿತ್ತು. ಆದರೆ ಅದು ಆರೂಢ ಸಂಗಮನಾಥನಿಗಿಂತಲೂ ಪೂರ್ವದಲ್ಲಿಯೇ, 12ನೆಯ ಶತಮಾನಕ್ಕಿಂತಲೂ ಮೊದಲೇ ಅಲ್ಲಿ ಸಂಗಮೇಶ್ವರ ದೇವಸ್ಥಾನವಿತ್ತು. ಈ ದೇವಸ್ಥಾನದಿಂದ ಗುಡ್ಡದ ಮೇಲೆ ಅನತಿ ದೂರದಲ್ಲಿರುವ 'ಅಮರಕಲ್ಯಾಣ' ಮಾತ್ರ ಆರೂಢ ಸಂಗಮನಾಥನ ಶರಣ ಸಂಘಟನೆಯ ಕುರುಹು ಎಂಬುದರಲ್ಲಿ ಅನುಮಾನವಿಲ್ಲ; ಆದರೆ ಅದೂ ಕೂಡಾ ಸಗರ ನಗರಕ್ಕೆ ಸಂಬಂಧಿಸಿದ ಕ್ಷೇತ್ರವೆಂಬುದನ್ನು ಅಲ್ಲಗಳೆಯುವಂತಿಲ್ಲ. ಆರೂಢ ಪರಂಪರೆಯ 'ಗುಂಡಬಸವೇಶ್ವರ ಚರಿತ್ರೆ'ಯಲ್ಲಿ ಸಂಗಮನಾಥನ ಉಲ್ಲೇಖ ಹಲವು ಕಡೆ ಬಂದಿದೆ.[12] ಅಲ್ಲಿ ನಿರೂಪಿತವಾಗಿದ್ದಂತೆ ಆರೂಢ ಸಂಗಮನಾಥನು ಸಗರದ ಹೊರಗೆ ಮಠ ಕಟ್ಟಿದನೆಂಬ ವಿಚಾರ ಬರುವುದರಿಂದ ಅದು ಸಗರದ ಮಠವೆಂದೇ ಪರಿಗಣಿಸಬೇಕಾಗುತ್ತದೆ.

ಕೊಡೆಕಲ್ಲ ಬಸವಣ್ಣನ ಕಿರಿಯ ಪುತ್ರ ರಾಚಪ್ಪಯ್ಯ ರಚಿಸಿದ 'ಸುವ್ವಿವಚನ'ವೆಂಬ ಲಘುಕಾವ್ಯದಲ್ಲಿ ಬರುವ–

***"ಹಗಿಯದ ಭತ್ತವ ಹುಗದವರು ಸತ್ತಾರೆ***
***ಸಗರದ ಸಂಗಯ್ಯನ ಶರಣರಿಗೆ ಉಣಲುಂಟು***
***ಬಗೆಗೆಟ್ಟಿರ್ಯಾರೆ ಬರನೆಂದು"*** [13]

ಎಂಬ ತ್ರಿಪದಿಯಲ್ಲಿ 'ಸಗರದ ಸಂಗಯ್ಯ'ನ ಉಲ್ಲೇಖವಿರುವುದು ಕೂಡಾ ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ.

ಕ್ರಿ.ಶ.1331 ರಲ್ಲಿದ್ದ ನಾಗರಾಜನೆಂಬ ಕವಿ 'ಪುಣ್ಯಾಶ್ರವ' ಎಂಬ ಜೈನಕಾವ್ಯವನ್ನು ರಚಿಸಿದ್ದಾನೆ. ಇದು ಸಂಸ್ಕೃತದಿಂದ ಕನ್ನಡಿಕರಿಸಿದ ಗ್ರಂಥ. ಸಗರದ ನಗರದವರು ಕೇಳಿಕೊಂಡುದಕ್ಕಾಗಿ ತಾನು ಈ ಕೃತಿ ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ.[14] ಇದರಿಂದ ತಿಳಿದುಬರುವ ಸಂಗತಿಯೆಂದರೆ, ಬ್ರಹ್ಮಯ್ಯನ ಕಾಲದಿಂದ 14ನೆಯ ಶತಮಾನದವರೆಗೆ ಸಗರವು ಸಗರವು ವೀರಶೈವ, ವೈದಿಕದ ಜೊತೆಗೆ ಜೈನಧರ್ಮದ ಕೇಂದ್ರವಾಗಿತ್ತೆಂಬುದು ಖಚಿತಗೊಳ್ಳುತ್ತದೆ. ಅಂತೆಯೇ ಕ್ರಿ.ಶ.1489 ರಲ್ಲಿದ್ದ ಕೊಡೇಕಲ್ಲ ಬಸವಣ್ಣನು ರಚಿಸಿದ 'ದುಮ್ಮಿಸಾಲೆ' ಕಾಲಜ್ಞಾನದಲ್ಲಿ ಕೂಡಾ 'ಸಗರ'ನಗರದ ಉಲ್ಲೇಖವಿದೆ.[15]

ಶಾಂತಲಿಂಗದೇಶಿಕ ಕವಿ ವಿರಚಿತ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ'ದ "ಶಿವನಿಂದೆಗೆಯ್ದುನನಿರಿದ ಜಗದೇವ ಎಂಬುದಕ್ಕೆ ಕಥೆ"ಯಲ್ಲಿ ಸಗರದ ಮಲ್ಲಯ್ಯ ಬೊಮ್ಮಯ್ಯರೆಂಬ ಶಿವಶರಣರ ಚರಿತ್ರೆ ಬುರುತ್ತದೆ. ಅದರಲ್ಲಿ "......ಜಗದೇವನನುಭವಿಸುವ ವಾರ್ತೆಯ ಮಲ್ಲಯ್ಯ ಬೊಮ್ಮಯ್ಯಗಳು ಕೇಳಿ ಸಗರದಿಂದ ಬಂದು ತಾವು ಜಗದೇವನಂತೆ ಮಾತೆಯಿಕ್ಕಿದ ಪೂರ್ಣ ಪ್ರಸಾದವನಾರೋಗಿಸುತ್ತಿರಲು ಆಗ ಬಸವಣ್ಣ ಕಪ್ಪಡಿಗೆ ಹೋದರೆಂಬ ವಾರ್ತೆಯಂ ಕೇಳಿ ವೀರ ಜಡೆಗಳಂ ಕಟ್ಟಿ ವೀರವತಾರರು ಭಸಿತವನುದ್ಧೂಳಿಸಿ ವೀರಗಾಸೆಯನ್ನುಟ್ಟು ವೀರಭದ್ರಾಯನಮೋಯಂದುಗ್ಘಡಿಸುತ್ತ ಮೂವರು ಬಿಜ್ಜಳನ ಯಿರುಳಿನೋಲಗಕ್ಕೆಯ್ದಿ ಪೋಗುವಾಗ.............. ಸಿಡಿಲೆರಗಿದಂತೆ ಪೋಗಿ ರತ್ನದ ಗದ್ದುಗೆಯ ಮೇಲಿರ್ದ ಬಿಜ್ಜಳನನಿರಿದು ಹಲ್ಲಕ್ಕಿತ್ತು ಹಣೆಯಮೇಲಿಟ್ಟು ನಾಲಗೆಯ ಕೊಯ್ದುಯದೆಯ ಮೇಲಿಟ್ಟು ಕಯ್ಯ ಕೊಯ್ದು ಕಠಾರಿಯ ಮೋನೆಯ ಮೇಲಾಂತು ವೀರಪ್ರಮಥರ ಬಿರಿದಿನ ಮಾಸಾಳುಗಳು ಪರವಾದಿ ಬಿಜ್ಜಳನ ಕೊಂದೆವೆನ್ನುತ್ತಾ ಬೊಬಿರಿದಾಲುತ್ತ ಬರಲು..........."[16] ಎಂಬ ಕಥಾಭಾಗವಿದೆ. ಇಲ್ಲಿ ಬರುವ

ಮುಖ್ಯವಾದ ಸಂಗತಿಯೆಂದರೆ, ಕಲ್ಯಾಣ ಕ್ರಾಂತಿಯ ಸಂದರ್ಭ; ಬಿಜ್ಜಳನು ಬ್ರಾಹ್ಮಣ ಮಧುವರಸ ಮತ್ತು ಸಮಗಾರ ಅರಳಯ್ಯನಿಗೆ ಘನಗೋರ ಶಿಕ್ಷೆ ವಿಧಿಸುತ್ತಾನೆ; ಇದರಿಂದ ಕನಲಿ ಕೆಂಡವಾದ ಕಲ್ಯಾಣದ ಶರಣರ ದಂಡು ಬಸವಣ್ಣನ ನೇತೃತ್ವದಲ್ಲಿ ಸಭೆ ಸೇರುತ್ತದೆ. ಆ ವೇಳೆಗಾಗಲೇ ಬಸವಣ್ಣನಿಗೆ ಗಡಿಪಾರು ಶಿಕ್ಷೆ ನೀಡಲಾಗಿರುತ್ತದೆ. ಬಸವಣ್ಣ ಕಲ್ಯಾಣ ಬಿಟ್ಟು ಹೋಗುವುದಕ್ಕಿಂತ ಮೊದಲು ನಡೆದ ಶರಣರ ಸಂಘಟನೆಯ ಸಭೆ ಅದು; ಸಭೆಯಲ್ಲಿ 'ಶಿವಶರಣರಿಗೆ ಅನ್ಯಾಯವಾಗಿ ಶಿಕ್ಷೆ ವಿಧಿಸಿದ ಪರವಾದಿ ಬಿಜ್ಜಳನಿಗೆ ಧರ್ಮಮಾರ್ಗದಿಂದ ಮರಣದಂಡನೆ ನೀಡಲು' ತೀರ್ಮಾನಿಸಲಾಗುತ್ತದೆ. ಅದರ ಜವಾಬ್ದಾರಿಯನ್ನು ಜಗದೇವ ಮತ್ತು ಮಲ್ಲಯ್ಯ ಬೊಮ್ಮಯ್ಯರಿಗೆ ವಹಿಸಲಾಗುತ್ತದೆ. ಈ ಮಲ್ಲಯ್ಯ ಬೊಮ್ಮಯ್ಯ ಶರಣರು ಯಾರು? ಎಲ್ಲಿಯವರು? ಎಂಬ ಪ್ರಶ್ನೆಗಳಿಗೆ ಉತ್ತರವಿಲ್ಲದೆ. ಈ ಇಬ್ಬರು ಶರಣರು ಆ ಕಾಲದಲ್ಲಿ ಸಗರನಾಡಿನ ರಾಜಧಾನಿಯಾಗಿದ್ದ ಸಗರ ನಗರದ ವೀರಶೈವ ಶರಣರು. ವೀರಶೈವಧರ್ಮದ ಗಣಾಚಾರ ವ್ರತವನ್ನು ಅನಸರಿಸುತ್ತ ಧರ್ಮ ಸಂರಕ್ಷಣೆಯ ಪಣ ತೊಟ್ಟಿದ್ದವರು. ಈ ವೀರಶರಣರು ಜಗದೇವನೆಂಬ ಇನ್ನೊಬ್ಬ ವೀರಶರಣನೊಂದಿಗೆ ಸೇರಿ ಇವರು ವೀರಗಾಸೆಯನ್ನುಟ್ಟು ವೀರಾವೇಶದಿಂದ ದೊರೆ ಬಿಜ್ಜಳನ ಓಲಗವನ್ನು ಹೊಕ್ಕು, ದಾರಿಯಲ್ಲಿದ್ದ ಪಟುಭಟರನ್ನು ತೊಲಗಿಸಿ ಬಿಜ್ಜಳನ ಓಲಗವನ್ನು ಹೊಕ್ಕು, ಅಲ್ಲಿ ರತ್ನದ ಸಿಂಹಾಸನದ ಮೇಲೆ ಕುಳಿತಿದ್ದ ಬಿಜ್ಜಳನನ್ನು ಇರಿದು, ಹಲ್ಲು ಕಿತ್ತು ಹಣೆಯ ಮೇಲಿಟ್ಟು, ನಾಲಗೆನ್ನು ಕೊಯ್ದು ಎದೆಯ ಮೇಲೆ ಇಟ್ಟು, ಕೈಯನ್ನು ಕತ್ತರಿಸಿ ತಮ್ಮ ಕಠಾರಿಯ ಮೇಲೆ ಸಿಕ್ಕಿಸಿಕೊಂಡು ಅತೀ ಕ್ರೂರವಾಗಿ ದೊರೆ ಬಿಜ್ಜಳನನ್ನು ಸಂಹರಿಸಿ, ಕೆರಳಿದ ವೀರಾವೇಶದಿಂದಲೇ ಅರಮನೆಯಿಂದ ಹೊರಗೆ ಬರುತ್ತಾರೆ. ಆ ವೀರ ಶರಣರಿಗೆ ಶಿವನು ಪ್ರಮಥಗಣ ಪದವಿಯನ್ನು ನೀಡಿದನೆಂದು ಕಾವ್ಯ ವರ್ಣಿಸುತ್ತದೆ. 12ನೆಯ ಶತಮಾನದಲ್ಲಿ ಜರುಗಿದ ಈ ಚಾರಿತ್ರಿಕ ಘಟನೆಯಲ್ಲಿ ಕಲ್ಯಾಣದ ಶಿವಶರಣರ ಸಂಘಟನೆಗೆ ಸಂಕಟದ ಕಾಲದಲ್ಲಿ ಬೆನ್ನುಲುಬಾಗಿ ನಿಂತು ಧಾರ್ಮಿಕ ವಿಜಯವನ್ನು ತಂದುಕೊಟ್ಟ ಕೀರ್ತಿ ಮಾವ್ವರು ವೀರಶರಣರಿಗೆ ಸಲ್ಲುತ್ತದೆ. ಅವರಲ್ಲಿ ಮಲ್ಲಯ್ಯ ಬೊಮ್ಮಯ್ಯರೆಂಬ ಶರಣರು ಸಗರದವರು ಎಂಬುದು ಗಮನಾರ್ಹ ಸಂಗತಿಯಾಗಿದೆ.

ಕಂಪ್ಲಿಯ ರಾಜಕುಮಾರ ಕುಮಾರರಾಮ (ಕ್ರಿ.ಶ.1300–1330)ನ ಪವಿತ್ರವಾದ ನಿರ್ಮಲ ವ್ಯಕ್ತಿತ್ವವನ್ನು ನಿರೂಪಿಸುವ ನಂಜುಂಡ ಕವಿಯ 'ರಾಮನಾಥ ಚರಿತೆ'ಯಲ್ಲಿ ಸಗರದ ಉಲ್ಲೇಖ ಹಲವು ಕಡೆ ಬಂದಿದೆ.

***"ಕೊಟ್ಟೆನು ಬಿದರೆಯ ಕೊಟ್ಟೆನು ಸಗರವ***
***ಕೊಟ್ಟೆನು ನಿಂಬಾಪುರವ।***
***ಕೊಟ್ಟೆನು ಜಂಬುಖಂಡಿಯನು ರಾಯಚೂರನು***
***ಕೊಟ್ಟೆನಿಕ್ಕುವುದು ತೋರಣವ॥"***[17]

***"ಸಾಗರದಾನವೆಂಟುಂ ದೆಸೆಗಳೋಳು......"***
***"ಸಾಗರದಾನದ ಮುಂದೆ ಸಂಗ್ರಾಮವನು ಎಸಗಿ....."***
***"ಕುರುಕೊಂಕಣ ಹೂಣ ಹೊಯ್ಸಳ ತುಳುವರು***
***ಕರಜನ ಸಗರ ಬಂಗಾಳ......"***
***ಮುತ್ತಿನ ಗುಡಿ ಹೊಯ್ದವು ಸಾಗರದಾನ***
***ವೆತ್ತಿತು...................."***[18]

ಈ ಮುಂತಾದ ಪದ್ಯಗಳಲ್ಲಿ ಉಕ್ತವಾಗಿರುವ ಸಗರ, ಸಾಗರ ಪದಗಳು ಸಗರ ನಗರವನ್ನು ಕುರಿತಿವೆ.

ಕವಿ ಮಾಸಿವಾಳದ ನಾಗರಾಜನು 'ಪುಣ್ಯಾಶ್ರವ' ಎಂಬ ಮಹತ್ವದ ಕೃತಿಯನ್ನು ರಚಿಸಿದ್ದಾನೆ. ಇದು ಜೈನಧರ್ಮದ ತಾತ್ವಿಕ ಕೃತಿಯಾಗಿದೆ. ಸಗರ ನಗರದವರು ವಿನಯದಿಂದ ಕೇಳಿಕೊಂಡುದಕ್ಕಾಗಿ ತಾನು 'ಪುಣ್ಯಾಶ್ರವ' ಎಂಬ ಸಂಸ್ಕೃತ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಈ ಕುರಿತ ವಿವರವನ್ನು ತಿಳಿಸುತ್ತ ಕವಿ ನಾಗರಾಜನು–

***"......ಸಗರದ ವಿನೆಯಾ***
***ವೃಂದಂ ಕೊಂಡಾಡಿ ಪೇಳ್ವುದೆನೆ ಕನ್ನಡದಿಂ।***
***ಮಂದುಮತಿಯಪ್ಪನಾ ಮನ***
***ದಂದೆಂ ಪೇಳಲೆವೊಲಿದು ಪುಣ್ಯಾಶ್ರವಮಂ॥***
***ಮುನ್ನಂ ಸಂಸ್ಕೃತದಿಂದ***
***ತ್ಯುನ್ನತಿವೆತ್ತಿರಲು ಕೇಳ್ದು ಸಗರದ ನಗರಂ।***
***ಕನ್ನಡಿಸೆನೆ ನಾಗೇಂದ್ರಂ***
***ಕನ್ನಡಿಸಿದನೊಲಿದು ನೋಡಿ ಪುಣ್ಯಾಶ್ರವಮಂ॥"***[19]

ಎಂದು ನಿರೂಪಿಸಿದ್ದಾನೆ ಈ ಮೊದಲು ಸಂಸ್ಕೃತದಲ್ಲಿದ್ದ 'ಪುಣ್ಯಾಶ್ರವ'ನೆಂಬ ಜೈನಧರ್ಮದ ಪುಣ್ಯಕಾವ್ಯವನ್ನು ಕೇಳಿ ಆನಂದಿಸಿದ್ದ ಸಗರದ ನಗರದವರು ಅದನ್ನು ಕನ್ನಡದಲ್ಲಿ ಅನುವಾದಿಸಬೇಕೆಂದು ವಿನಂತಿಸಿಕೊಂಡುದಕ್ಕಾಗಿ ಈ ಅನುವಾದ ಕಾವ್ಯ ರಚಿಸಿರುವುದಾಗಿ ತಿಳಿಸಿದ್ದಾನೆ. ಇದೊಂದು ಐತಿಹಾಸಿಕ ಘಟನೆಯಾಗಿದ್ದು, ಇದರಿಂದ ಸಗರನಗರದವರ ಧಾರ್ಮಿಕ ಮನೋಭಾವ ಮತ್ತು ಧರ್ಮಕಾರ್ಯದ ತ್ಯಾಗಬುದ್ಧಿ ವ್ಯಕ್ತವಾಗುತ್ತದೆ.

ಕ್ರಿ.ಶ.15ನೆಯ ಶತಮಾನದಲ್ಲಿದ್ದ ಅರೂಢ ಸಂಪ್ರದಾಯದ ಕ್ರಾಂತಿಕಾರಿ ಶರಣ ತಿಂಥಣಿ ಮೋನಪ್ಪಯ್ಯನ ವಚನದಲ್ಲಿ ಸಗರ ಮತ್ತು ಸಗರನಾಡಿನ ಉಲ್ಲೇಖವಿದೆ.

***"ಗದುಗನಾಡ ಗಾವುದಿ ಎಲಬುರಗಿನಾಡು ಪೋಲೆಯ***
***ಕುಪ್ಪಗಿನಾಡು ನಷ್ಟ ತಾವರಗೇರಿ ತಡಾಕಿ***
***ಮುದಗಲ್ಲು ಮೂಲ ಸಗರನಾಡು ವಸ್ತಾದಿ***
***ಬಲ್ಲದಾದರೆ ಬಂಕಾಪುರ ನೆಲೆಗೊಂಡರೆ ಮುದೆನೂರು***
***ಸಾಲವಳಿಯಾದರೆ ಸಗರ ಶಪುರದಲ್ಲಿ***
***ನೆಲೆಗೊಳಿಸಿದರು ನಮ್ಮ ಹಿರಿಯರು ಕಾಣಾ ಬಸವಣ್ಣ"*** [20]

ಎಂಬ ಮೋನಪ್ಪಯ್ಯನ ಈ ವಚನದಲ್ಲಿ ಸಗರನಾಡಿನ ಅಭಿವ್ಯಕ್ತಿಯ ಜೊತೆಗೆ 'ಸಗರ ಶಾಪುರ' ಉಲ್ಲೇಖಗೊಂಡಿರುವುದರಿಂದ ಈತನ ಕಾಲಕ್ಕಾಗಲೇ ಶಾಹಿಗಳಿಂದ ಸಗರ ನಗರ ವಿನಾಶಕ್ಕೆ ತುತ್ತಾಗಿ 'ಶಾಪುರ'ವಾಗಿತ್ತಾದರೂ ಸಗರದ ಅಸ್ಮಿತೆ ಜೀವಂತವಾಗಿರುವುದನ್ನು ಸೂಚಿಸುತ್ತದೆ.

ಕ್ರಿ.ಶ.18ನೆಯ ಶತಮಾನದಲ್ಲಿ ರಚನೆಗೊಂಡಿರುವ ಚೆನ್ನಬಸವ ಕವಿ ರಚಿಸಿದ 'ಶ್ರೀ ಕೆಂಚಬಸವೇಶ್ವರ ಪುರಾಣ'ದಲ್ಲಿ ಸಗರದೇಶಸ್ಥನಾಗಿದ್ದ ಸಗರ ಚಕ್ರವರ್ತಿಯ ಉಲ್ಲೇಖದೊಂದಿಗೆ ಸಗರನಾಡನ್ನು ಕುರಿತು ಹೀಗೆ ವರ್ಣಿಸಲಾಗಿದೆ;

***"ಸತತ ಇಂತೊಪ್ಪುವ ಸುದೇಶೋ***
***ನ್ನತಿಯ ಪೇಳಲಿ ಕರಿದು ಮಧ್ಯದಿ***
***ಖತಿವಡದು ರಂಜಿಸಿತು ರತುನದ ತತಿಗೆ ತವರೆನಿಸಿ।***
***ಪ್ರತಿರಹಿತರಿಗೆ ಮತಿಗರದು ಅಹಿ***
***ಪತಿಸ್ತುತಿಸಿ ವಾಙ್ಮತಿಗೆ ನಿಲುಕದ***
***ಹಿತವ ತಾಳಿದುದಮಮ ಸಾಗರರಾಜ್ಯ ಸೂರಭೂಜ॥"***[21]

ಎಂಬ ಈ ಪದ್ಯದಲ್ಲಿ ಪ್ರಾಕೃತಿಕ ಸೌಂದರ್ಯ, ಸಂಪತ್ತು, ಆಧ್ಯಾತ್ಮ ಮತ್ತು ವಿದ್ಯೆಗೆ ಸಗರರಾಜ್ಯ ಹೆಸರಾಗಿತ್ತೆಂದು ನಿರೂಪಿಸಲಾಗಿದೆ. ಇನ್ನು ಶಂಕರ ಕವಿ (ಕ್ರಿ.ಶ.1754) ವಿರಚಿತ 'ಶರಣ ಮೋನಪ್ಪಯ್ಯನ ಚರಿತ್ರೆಯಲ್ಲಿ –

***"ಆ ಮಹಾಮೇರುವಿನ ದಕ್ಷಿಣಸೀಮೆ ಐವತ್ತಾರು ದೇಶದಿ***
***ನಾಮ ಸಗರನಾಡೆನಿಪ ಶುಚಿಭೂಮಿ ಮೆರೆದಿಹುದು।***
***ಕಾಮಿತಾರ್ಥದ ವಸ್ತುವಿಪ್ಪುದು ಪ್ರೇಮದಿ ಸುರತರುವು ಸಕಲಾ***
***ಆ ಮಹಾದೈಶ್ವರ್ಯ ಪದವಿಯ ಭೂಮಿ ಮೆರೆದಿಹುದು"***[22]

ಎಂದು ಸಗರನಾಡಿನ ಪಾವಿತ್ರ್ಯತೆ, ಐಶ್ವರ್ಯ ಮತ್ತು ಕೀರ್ತಿಯನ್ನು ಕೊಂಡಾಡಲಾಗಿದೆ. ಗುರುಲಿಂಗ ಕವಿ (ಕ್ರಿ.ಶ.1875–1928)ಯ 'ಶ್ರೀ ಶರಣಬಸವೇಶ್ವರ ಪುರಾಣ'ದಲ್ಲಿ ಅರಳಗುಂಡಗೆಯ ಸ್ಥಾನನಿರ್ದೇಶನವನ್ನು ಮಾಡುವಾಗ "...........ಕರ್ನಾಟ ದೇಶಮತ್ತದರೊಳಗೆ ಸಗರನಾಡದು ಸುಮನಗರಡಿಯ ಪುರ....."[23] ವೆಂದು ವರ್ಣಿಸಲಾಗಿದೆ. ಅಲ್ಲದೆ, ಸಗರನಾಡಿನ ಮಹತ್ವವನ್ನು ಕುರಿತು–

***"ಸಾರ ಜಂಭೂದ್ವೀಪ, ಮೆರೆವುದದರೊಳತಿ ಗಂ***
***ಭೀರತೆಯ ಪೆತ್ತೆಸೆವ ಕರ್ನಾಟದೇಶ ಮದ***
***ನಾರಿ ಭಕ್ತಿಯ ಬೀಡು ಸೂರಿಸುಖದೀಡು ಸುಕೃತದ ಜೋಡು ಸಗರನಾಡು"***[24]

ಎಂದು ಬಹು ಸುಂದರವಾಗಿ ನಿರೂಪಿಸಲಾಗಿದೆ. ಅಲ್ಲದೆ, ಈ ಕಾವ್ಯದಲ್ಲಿ ಸಗರನಾಡಿನ ಸಂಪದ್ಭರಿತವಾದ ವೈಭವವನ್ನು ಕವಿ ಭಾವ ತುಂಬಿ ವರ್ಣಿಸಿದ್ದಾನೆ.

***"ಎತ್ತ ನೋಡಿದಡತ್ತ ಕಳಮಕ್ಷೇತ್ರಂಗಳಿಂ***
***ದೆತ್ತ ನೋಡಿದಡತ್ತಲನ್ನ ಛತ್ರಂಗಳಿಂ***
***ದೆತ್ತ ನೋಡಿದತ್ತ ರನ್ನಗೋತ್ರಂಗಳಿಂದೆತ್ತೆತ್ತಲುಂ ಹರಿಯುವ।***
***ಚಿತ್ತ ತೋಷಿಪ ತಳಿರು ಕುಸುಮ ಫಳಗುದಿಗಳಿಂ***
***ಅತ್ಯಧಿಕ ಕೃಷ್ಣೆ ಭೀಮೆಯೆಂಬ ನದಿಗಳಿಂ***
***ಮುತ್ತು ಮಾಣಿಕ ರನ್ನ ಮಣಿಕಣಿಗಳಿಂದ ಪ್ರಭೆವೆತ್ತು ಮೆರೆದುದು ಜನಪದಂ॥"***[25]

ಸಗರನಾಡಿನಲ್ಲಿ ಎತ್ತೆತ್ತ ನೋಡಿದರೂ ಭತ್ತದ ಹೊಲಗಳೇ ತುಂಬಿದ್ದವೆಂದೂ, ಆ ನಾಡು ಅನ್ನಛತ್ರಗಳ ಬೀಡಾಗಿತ್ತೆಂದೂ, ರನ್ನಗೋತ್ರಗಳ ಕೇಂದ್ರವಾಗಿತ್ತೆಂದೂ, ಕೃಷ್ಣೆ–ಭೀಮಾ ನದಿಗಳಿಂದ ಆವರಿಸಲ್ಪಟ್ಟಿದ್ದ ಈ ನಾಡು ಚಿಗುರು ತುಂಬಿದ ಮರಗಳಿಂದ, ಘಮಘಮಿಸುವ ಪುಷ್ಪಗಳಿಂದ, ರಸಭರಿತ ಹಣ್ಣುಗಳಿಂದ ಮನಸ್ಸಿಗೆ ಮುದ ನೀಡುತ್ತಿತ್ತೆಂದೂ, ಜೊತೆಗೆ ಮುತ್ತು, ಮಾಣಿಕ್ಯ, ರತ್ನ ಮತ್ತು ಮಣಿಗಳ ಖಣಿಯಾಗಿ ಸಗರನಾಡು ರಂಜಿಸುತ್ತಿತ್ತೆಂದು ಗುರುಲಿಂಗ ಕವಿ ವರ್ಣಿಸಿರುವಲ್ಲಿ ಸಗರನಾಡು

ವೈವಿಧ್ಯಮಯವಾದ ಸಿರಿ–ಸಂಪತ್ತಿನ ಆಗರವಾಗಿತ್ತೆಂಬುದು ಮನದಟ್ಟಾಗುತ್ತದೆ. ಮಧ್ಯಕಾಲದಲ್ಲಿ ಮಹಮ್ಮದೀಯರು ಸಗರನಾಡಿನ ಮೇಲೆ ಪದೇ ಪದೇ ದಾಳಿ ಮಾಡಿರುವುದಕ್ಕೆ ಪ್ರಾಯಶಃ ಇದೇ ಕಾರಣವಿರಬಹುದು.

ಮಂಗಾಪುರ ಮೇಗೇರಿಮಠದ ಚಂದ್ರಶೇಖರ ಶಾಸ್ತ್ರಿ(ಪತ್ರೆಸ್ವಾಮಿ) ರಚಿಸಿರುವ 'ಶ್ರೀ ಚರಬಸವೇಶ್ವರ ಪುರಾಣ' ಕೃತಿಯಲ್ಲಿ ಕೂಡ ಸಗರನಾಡಿನ ವರ್ಣನೆ ವಿಶಿಷ್ಟವಾಗಿ ಮೂಡಿಬಂದಿದೆ.

*"ಬೆಳೆಯು ತೀವಿದ ಪೊಲಗಳಿಂದಂ*
*ಫಲಿತ ವಿವಿಧ ಕುಜಂಗಳಿಂದಂ*
*ಚೆಲುವ ಗುಡಿಗೋಪುರದ ಪೊಳಲುಗಳಿಂದ ವೀರನೃಪ।*
*ಲಲಿತ ಕವಿ ಶಿಲ್ಪಿಗಳ ತತಿಯಿಂ*
*ತೊಳಪ ಶಿವಗುರು ಶರಣದಾಸರ*
*ಬಳಗದಿಂ ಪೆರ್ಮೆಯನು ತಳೆದು ವಿರಾಜಿಪುದು ತಿರೆಯೊಳ್॥"*[26]

ಎಂಬ ಇಲ್ಲಿನ ವರ್ಣನೆಯಂತೆ 'ಸಗರನಾಡು ಬೆಳೆ ತುಂಬಿದ ಹೊಲಗಳಿಂದ, ಸುಪುಷ್ಟವಾದ ಹುಲ್ಲಿನ, ಗಿಡಗಂಟೆಗಳ ಕಣಜದಿಂದ, ಸುಂದರವಾದ ಗುಡಿ–ಗೋಪುರಗಳ ಪಟ್ಟಣಗಳಿಂದ, ಶೂರರಾದ ರಾಜರಿಂದ, ರಸಿಕರಾದ ಕವಿ–ಶಿಲ್ಪಿಗಳಿಂದ, ಶರಣರು ಮತ್ತು ದಾಸರ ಬಳಗದಿಂದ ಕೂಡಿತ್ತು; ಭೂಲೋಕವೇ ಹೆಮ್ಮೆಪಡುವಂತೆ ಸಗರನಾಡು ವಿರಾಜಿಸುತ್ತಿತ್ತೆಂಬ ಅಪೂರ್ವವಾದ ಭಾವ ಈ ಪದ್ಯದಲ್ಲಿದೆ.

*"ಧರೆಯೊಳೀಪರಿ ಮೆರೆದ ಕನ್ನಡ*
*ಸಿರಿಯ ನೈಜಾಂರಾಜ್ಯದೊಳುಮಿಗೆ*
*ಪರಮಪಾವನ ನಾಮದಿಂ ಬಹುದಿನದೆ ಪೆಸರಾಂತ।*
*ಮಿರುಪ ಕೃಷ್ಣಾಭೀಮ ನದಿಗಳಿ ವೆರಡರುರುಸಂಗಮದೊಳಿರ್ದಾ*
*ಕರಮೆಸೆವ ಶೀ ಸಂಗಮೇಶನ ಭವನ ಮೊದಲಾಗಿ॥* [27]

ಎಂಬ ಪದ್ಯದಲ್ಲಿ 'ನಿಜಾಂರಾಜ್ಯದಲ್ಲಿನ ಕನ್ನಡದ ಸಿರಿಭೂಮಿಯಾಗಿ, ಕೃಷ್ಣಾ–ಭೀಮಾ ನದಿಗಳ ಮಧ್ಯದ ಪ್ರದೇಶವಾಗಿದ್ದ ಈ ನಾಡು ಶ್ರೀ ಸಂಗಮೇಶನ ಭವನವಾಗಿ ಕಂಗೊಳಸಿಸುತ್ತಿತ್ತು' ಎಂದು ವರ್ಣಿಸಲಾಗಿದೆ. ಮುಂದುವರಿದು ನಿರೂಪಿಸುತ್ತಾ–

*"ಪಿರಿದೆಸವ ಸುರಪುರಸುಶಾಪುರ*
*ದೆರಡು ತಾಲ್ಲೂಕುಗಳವರೆಗಿರು*
*ತಿರುವ ಪ್ರಾಂತಕೆ ಸಗರನಾಡೆಂದೆನುತೆ ಪೇಳುವರು।*
*ಸುರಚಿರದ ಘನ ಸಗರನಾಡಿದು*
*ಪರಮಭಕ್ತಿಯ ಬೀಡು ಫಲದಿಂ*
*ಭರಿತಮಾಗಿಹ ವೃಕ್ಷತತಿಗಳ ಘನತರದ ಕಾಡು॥"*[28]

ಎಂದು ಹೇಳುವಲ್ಲಿ 'ಸುರಪುರ ಮತ್ತು ಶಾಪುರ ಎರಡು ತಾಲ್ಲೂಕುಗಳ ಪ್ರಾಂತಕ್ಕೆ ಸಗರನಾಡೆಂದು ಹೇಳುವರು; ಘನತೆಯ ಬೀಡಾದ ಸಗರನಾಡು ಸ್ಥಿರವಾದ ದೇವತೆಗಳ ಕ್ಷೇತ್ರವಾಗಿದೆ; ಪರಮಭಕ್ತಿಯ

ಬೀಡಾಗಿದೆ; ಸದಾ ಫಲಗಳಿಂದ ಕೂಡಿದ ಗಿಡಮರಗಳ ಭವ್ಯವಾದ ಕಾಡಾಗಿದೆ' ಎಂದು ಭಾವತುಂಬಿ ಬಣ್ಣಿಸಲಾಗಿದೆ.

ಸಗರನಾಡು ತನ್ನ ವೈಭವದ ಕಾಲದಲ್ಲಿ ಇಂದಿನ ಸುರಪುರ, ಶಾಪುರ, ಜೇವರ್ಗಿ ಮತ್ತು ಚಿತ್ತಾಪುರದ ಕೆಲಭಾಗವನ್ನು ಹೊಂದಿದ್ದ ವಿಸ್ತಾರವಾದ ಪ್ರದೇಶವಾಗಿತ್ತು. ಆದರೆ ಗುರುಲಿಂಗ ಕವಿಯ ಕಾಲ ಸ್ವಾತಂತ್ರೋತ್ಸವದ ಕಾಲವಾಗಿದ್ದು, ಆ ವೇಳೆಗಾಗಲೇ ಸಗರನಾಡಿನ ವಿಸ್ತಾರದ ಪರಿಕಲ್ಪನೆ ಜನಮನದಲ್ಲಿ ಪ್ರಜ್ಞೆಯಿಂದ ಕರಗಿ ಹೋಗಿ ಸುರಪುರ ಮತ್ತು ಶಾಪುರ ತಾಲ್ಲೂಕುಗಳೆಂದು ಸೀಮಿತಗೊಂಡು ಭಾವಿಸಲಾಗಿತ್ತು. ಗುರುಲಿಂಗ ಕವಿ ಕೂಡ ಈ ಕಾವ್ಯದಲ್ಲಿ 'ಸುರಪುರ ಸುಶಾಪುರದೆರಡು ತಾಲ್ಲೂಕುಗಳವರೆಗಿರುತಿರುವ ಪ್ರಾಂತಕೆ ಸಗರನಾಡೆಂದು ಪೇಳುವರು' ಎಂದು ನಿರೂಪಿಸುವಲ್ಲಿ ಸಗರನಾಡಿನ ಐತಿಹಾಸಿಕ ಪ್ರಜ್ಞೆ ಕವಿಯ ಕಾಲಕ್ಕಾಗಲೇ ಜನಮನದಲ್ಲಿ ಕುಬ್ಜಗೊಂಡು ಅರ್ಥ ಮಾಸಿರುವಂತೆ ತೋರುತ್ತದೆ. ಹೀಗೆ ಪ್ರಾಚೀನ ಶಾಸನ ಮತ್ತು ಮಧುಕಾಲೀನ ಕನ್ನಡ ಕಾವ್ಯಗಳಲ್ಲಿ ಸಗರದ ವೈಭವವು ವೈಶಿಷ್ಟ್ಯಪೂರ್ಣವಾಗಿ ಅಭಿವ್ಯಕ್ತಿಗೊಂಡಿದೆ.

**ಕೊನೆಟಿಪ್ಪಣಿಗಳು**

1. ಹನುಮಾಕ್ಷಿ ಗೋಗಿ (ಸಂ.) (1995). *ಸುರಪುರ ತಾಲೂಕಿನ ಶಾಸನಗಳು*, ಪು.87.
2. ಅದೇ, ಪು.98.
3. ಹಿರೇಮಠ ಆರ್.ಸಿ. (ಸಂ.) (1990). *ವೀರಶೈವಾಮೃತಪುರಾಣ.* ಪು.1451.
4. ಶಾಮರಾಯ ತ.ಸು. (1967). *ಶಿವಶರಣ ಕಥಾರತ್ನಕೋಶ.* ಪು.462.
5. ಪೂರ್ವೋಕ್ತ–3, ಪು.617.
6. ಕಲಬುರ್ಗಿ ಎಂ.ಎಂ. (ಪ್ರ.ಸಂ.) (1993). *ಸಮಗ್ರ ವಚನ ಸಂಪುಟ–9.* ಪು.197.
7. ಅದೇ, ಪು.194.
8. ಪೂರ್ವೋಕ್ತ–4, ಪು.473.
9. ಹಿರೇಮಠ ಆರ್.ಸಿ. ಮತ್ತು ಎಂ.ಎಸ್.ಸುಂಕಾಪುರ (ಸಂ.). (1964). *ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ,* ಭಾಗ–1, ಪು.195.
10. ಅದೇ, ಪು.315–316.
11. ಭೂಸನೂರಮಠ ಸಂ.ಶಿ. (ಸಂ.). (1950). *ಗುರುರಾಜ ಚಾರಿತ್ರ.* ಪು.106.
12. ಕಲಬುರ್ಗಿ ಎಂ.ಎಂ. (ಪ್ರ.ಸಂ.). *ಗುಂಡಬಸವೇಶ್ವರ ಚರಿತ್ರೆ, ಪ್ರಸ್ತಾವನೆ,* ಪು.XXV.
13. ಅನುಪಮಾ ಆದಾಪುರ. (2012). *'ಅಮರಕಲ್ಯಾಣ' ಸಾಂಸ್ಕೃತಿಕ ಅಧ್ಯಯನ,* ಪು.23.
14. ನರಸಿಂಹಾಚಾರ್ಯ ಆರ್. (1972). *ಕರ್ನಾಟಕ ಕವಿಚರಿತೆ,* ಪು.477–479, 1972.
15. ಬಸವಲಿಂಗ ಸೊಪ್ಪಿನಮಠ. (1995). ಕೊಡೆಕಲ್ಲ ಬಸವಣ್ಣ: ಒಂದು ಅಧ್ಯಯನ, ಪು.138.
16. ಪೂರ್ವೋಕ್ತ–9, ಪು.315–316.
17. ದೇವೀರಪ್ಪ ಎಚ್. (ಸಂ.) (1959). *ನಂಜುಂಡ ಕವಿ ವಿರಚಿತ 'ರಾಮನಾಥ ಚರಿತೆ' (ಪೂರ್ವಾರ್ಧ) ಸಂಪುಟ–2, ಸಂಧೀ–17,* ಪು.320.
18. ಬಸವರಾಜ ದೇಶಮುಖ (1985). *ಸಗರ ನಾಡದರ್ಶನ.* ಪು.178–179,
19. ಜವರೇಗೌಡ. ದೇ. (ಸಂ.) (1977). *ನಾಗರಾಜ ಕವಿ ವಿರಚಿತ 'ಪುಣ್ಯಾಶ್ರವ',* ಪು.6.

20. ಈರಣ್ಣ ಕೆ.ಪಿ. (1995). *ಮಹಾತ್ಮಾ ಮೌನೇಶ್ವರರು.* ಪು.32.
21. ಚೆನ್ನಬಸವ ಕವಿ ವಿರಚಿತ *'ಶ್ರೀ ಕೇಂಚಬಸವೇಶ್ವರ ಪುರಾಣವು',* ಸಂಧಿ–2, ಪದ್ಯ–16, ಪು.11.
22. ಪೂರ್ವೋಕ್ತ–20, ಪು.33.
23. ಬಸವರಾಜು ಎಲ್. (ಸಂ.) (1989). *ಶ್ರೀ ಶರಣಬಸವೇಶ್ವರ ಪುರಾಣ ಸಂಗ್ರಹ.* ಪು.6.
24. ಅದೇ, ಪು.7.
25. ಅದೇ, ಪು.7.
26. ಚಂದ್ರಶೆಖರಶಾಸ್ತ್ರಿ (1950). *ಶ್ರೀ ಚರಬಸವೇಶ್ವರ ಪುರಾಣವು.* ಪು.13–14.
27. ಅದೇ, ಪು.13.
28. ಅದೇ, ಪು.14.

**ಪರಾಮರ್ಶನ ಗ್ರಂಥಗಳು**


- ದೇವೀರಪ್ಪ ಎಚ್. (ಸಂ.). (1959). *ನಂಜುಂಡ ಕವಿ ವಿರಚಿತ 'ರಾಮನಾಥ ಚರಿತೆ(ಪೂರ್ವಾರ್ಧ) ಸಂಪುಟ–2,* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಹನುಮಾಕ್ಷಿ ಗೋಗಿ (ಸಂ.). (1995). *ಕಲ್ಬುರ್ಗಿ ಜಿಲ್ಲೆಯ ಶಾಸನಗಳು.* ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ
- ಹನುಮಾಕ್ಷಿ ಗೋಗಿ (ಸಂ.). *ಸುರಪುರ ತಾಲೂಕಿನ ಶಾಸನಗಳು.* ಮಹಿಳಾ ಸಾಹಿತ್ತಿಕಾ.
- ಕಲಬುರ್ಗಿ. ಎಂ.ಎಂ. (ಪ್ರ.ಸಂ.). (1993). *ಸಮಗ್ರ ವಚನ ಸಂಪುಟ–9,* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಶಾಮರಾಯ ತ.ಸು. (1967). *ಶಿವಶರಣ ಕಥಾರತ್ನಕೋಶ.* ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ.